ಪಿ. ಸಿ. 1845/2022 PW-1

ಕೆ.ರಾಮಭೂಪಾಲ್ ತಂದೆ ಕೆ.ನರಸಪ್ಪ

ದಿ.11-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಣೇಕರಿಸಲಾಯಿತು.

**ಪಾಟೀ ಸವಾಲು ಶ್ರೀ ಆರ್.ಎಮ್.ವೈ ವಕೀಲರಿಂದ :-**

ನನಗೆ ಪಿರ್ಯಾದಿ ದಾಖಲಿಸಲು ಮತ್ತು ಸಾಕ್ಷಿ ನುಡಿಯಲು ಅಧಿಕಾರ ಪತ್ರವನ್ನು ಮಾನ್ವಿ ಪತ್ತಿನ ಸಹಕಾರ ಸಂಘದವರು ಕೊಟ್ಟಿರುತ್ತಾರೆ ಅದನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇನೆ. ನನಗಿಂತ ಮುಂಚೆ ಸದರಿ ಬ್ಯಾಂಕಿನಲ್ಲಿ ರಮೇಶ ಎನ್ನುವವರು ಮ್ಯಾನೇಜರ್ ಇದ್ದರು. ಬಾಬುರಾವ್ ಗಸ್ತಿ ಎನ್ನುವವರು ನಮ್ಮ ಬ್ಯಾಂಕಿನಲ್ಲಿ ಪಿಗ್ಮಿ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆತ ಆತ್ಮಹತ್ಯೆ ಮಾಡಿಕೊಂಡು ತೀರಿಕೊಂಡಿರುತ್ತಾರೆ ಎಂದರೆ ಸರಿ. ಆತನು ಪಿಗ್ಮಿ ಏಜೆಂಟ್ ಆಗಿದ್ದಾಗ ನಮ್ಮ ಗ್ರಾಹಕರಿಗೆ ಬಹಳ ಮೋಸ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ಮಾನ್ವಿ ಪತ್ತಿನ ಸಹಕಾರಿ ಬ್ಯಾಂಕಿನಲ್ಲಿ ಕೋಟ್ಯಾಂತರ ರೂಪಾಯಿ ಹಗರಣ ಆಗಿದೆ ಎಂದು ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಬಂದಿರುತ್ತದೆ ಎಂದರೆ ಅದು ಇತ್ತೀಚೆಗೆ ವರದಿಯಾಗಿರುತ್ತದೆ ಎಂದು ನುಡಿಯುತ್ತಾರೆ.

2. ನಾವು ಸಾಲ ಕೊಡುವಾಗ ಪ್ರನೋಟ್, ಸಾಲದ ಒಪ್ಪಂದ ಪತ್ರ, ಮಂಜೂರು ಪತ್ರ ಮಾತ್ರ ತೆಗೆದುಕೊಳ್ಳುತ್ತೇವೆ. ಸಾಲ ಕಟ್ಟದೆ ವಿಫಲರಾದರೆ ಚೆಕ್ಕು ಪಡೆಯುತ್ತೇವೆ. ಏಜೆಂಟ್ ಕಡೆಯಿಂದ ಲೋನ್ ಕಟ್ಟಿದರೆ ಪಾಸ್ ಬುಕ್ಕಿನಲ್ಲಿ ನಮೂದು ಮಾಡಿ ಕೊಡುತ್ತೇವೆ ಎಂದರೆ ಸರಿ. ಪಿಗ್ಮಿ ಏಜೆಂಟಿಗೆ ನಾವು ಮೊಬೈಲ್ ಕೊಡುತ್ತಿದ್ದು ಅವರು ಸ್ಥಳಕ್ಕೆ ಹೋಗಿ ವಸೂಲಿ ಮಾಡಿ ಹಣ ಕಟ್ಟಿದ ಕೂಡಲೇ ಸಾಲಗಾರರ ಖಾತೆಗೆ ಜಮಾ ಆಗುತ್ತದೆ. ಆರೋಪಿತ ಎಷ್ಟೇ ಹಣ ಕಟ್ಟಿದ್ದರೂ ಸಹ ಅದು ಖಾತೆಗೆ ಜಮಾ ಆಗಿರುತ್ತದೆ. ಸದರಿ ಖಾತೆಯ ಸ್ಟೇಟಮೆಂಟನ್ನು ನಾವು ಹಾಜರು ಪಡಿಸಿರುತ್ತೇವೆ. ಆರೋಪಿತನು ಇದಕ್ಕಿಂತ ಮುಂಚೆ ಎರಡು ಸಲ ಸಾಲ ತೆಗೆದುಕೊಂಡಿದ್ದನು. ಏಜೆಂಟಗಳು ಸಾಲದ ಅರ್ಜಿಯನ್ನು ತುಂಬಿಸಿಕೊಂಡು ಬರುತ್ತಾರೆ. ಸಾಲದ ಒಪ್ಪಂದ ಪತ್ರ ಬ್ಯಾಂಕಿನಲ್ಲಿ ಆಗುತ್ತದೆ. ಮೊದಲು ಪಡೆದ ಸಾಲವನ್ನು ಆರೋಪಿತನು ಸರಿಯಾಗಿ ಕಟ್ಟಿಕೊಂಡು

ಬಂದಿರುತ್ತಾನೆ ಎಂದರೆ ಸರಿ. ಬಾಬುರಾವ್ ಗಸ್ತಿ ಎನ್ನುವವರು ಸುತ್ತ-ಮುತ್ತಲಿನ ಹಳ್ಳಿಗಳ ಜನರಿಗೆ ಲೋನ್ ಅರ್ಜಿಗಳನ್ನು ತುಂಬಿಸಿಕೊಂಡು ಮತ್ತು ಒಪ್ಪಂದ ಪತ್ರವನ್ನು ಸಹಿ ಮಾಡಿಸಿಕೊಂಡು ಸಾಷ್ಟು ಜನರಿಗೆ ಮೋಸ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸಾಲ ಒಪ್ಪಂದ ಪತ್ರಕ್ಕೆ ಸಾಕ್ಷಿದಾರರು ಇರುತ್ತಾರೆ. ಏಜೆಂಟಗಳು ಗ್ರಾಹಕರು ಕಟ್ಟಿದ ಸಾಲವನ್ನು ತಮ್ಮ ಖಾತೆಗೆ ಫೋನ್-ಪೇ/ಗೂಗಲ್-ಪೇ ಮೂಲಕ ಹಾಕಿಕೊಳ್ಳುವುದಿಲ್ಲ. ಬಾಬುರಾವ್ ತಮ್ಮ ಖಾತೆಗೆ ಹಣ ಹಾಕಿಕೊಂಡ ಬಗ್ಗೆ ಯಾರೂ ದೂರು ನೀಡಿರುವುದಿಲ್ಲ.

3. ನಾವು ಕಿರಾಣಿ ಮತ್ತು ಬುಕ್ ಸ್ಟಾಲಿಗಾಗಿ ಸಾಲ ಕೊಟ್ಟಿರುತ್ತೇವೆ. ಕಿರಾಣಿ ಅಂಗಡಿ ಇದೆಯೋ ಇಲ್ಲವೋ ಎನ್ನುವ ಬಗ್ಗೆ ಪರಿಶೀಲನೆ ಮಾಡಿರುತ್ತಾರೆ. ವ್ಯಕ್ತಿ ಸಾಲ ಕಟ್ಟಲು ಯೋಗ್ಯ ಇದ್ದಾನೆ ಎಂದು ವರದಿ ಕೊಟ್ಟ ಮೇಲೆ ನಾವು ಸಾಲ ಮಂಜೂರು ಮಾಡುತ್ತೇವೆ ಎಂದರೆ ಸರಿ. ಆರೋಪಿತನು ಯೋಗ್ಯ ಇದ್ದಾನೆ ಎಂದು ವರದಿ ಕೊಟ್ಟಿರುತ್ತಾರೆ. ಸದರಿ ವರದಿಯನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇವೆ. ಕೇಳಿದಾಗ ಹಣ ಕೊಡುತ್ತೇವೆ ಎನ್ನುವುದಕ್ಕೆ ಪ್ರನೋಟ್ ಬರೆದು ಕೊಡುತ್ತಾರೆ ಎಂದರೆ ಸರಿ. ಪ್ರನೋಟಿನಲ್ಲಿ ಸಾಕ್ಷಿಯಾಗಿ ಒಬ್ಬ ವ್ಯಕ್ತಿಯ ಎರಡು ಸಹಿಗಳು ಇರುತ್ತವೆ. ಪಾಸ್ ಬುಕ್ಕಿನಲ್ಲಿ ಕೈ ಬರವಣಿಗೆಯಲ್ಲಿ ಬರೆದು ಕೊಟ್ಟಿರುತ್ತೇವೆ. ಅದರಲ್ಲಿರುವ ಎಂಟ್ರಿಗಳು ಸರಿಯಾಗಿರುತ್ತವೆ. ಆರೋಪಿತನು ಚೆಕ್ಕನ್ನು ನಮ್ಮ ಮ್ಯಾನೇಜರ್ ರವರಿಗೆ ಕೊಟ್ಟಿರುತ್ತಾನೆ. ಈ ಕೇಸಿನ ವ್ಯವಹಾರಗಳು ನಮ್ಮ ಹಿಂದಿನ ಮ್ಯಾನೇಜರಿಗೆ ಗೊತ್ತಿರುತ್ತವೆ. ನನಗೆ ವೈಯಕ್ತಿಕವಾಗಿ ಈ ವ್ಯವಹಾರದ ಬಗ್ಗೆ ಗೊತ್ತಿಲ್ಲ. ಬಾಬುರಾವ್ ಗಸ್ತಿ ಎನ್ನುವವರು ಒಂದು ಸಾಲಕ್ಕೆ 3-4 ಲೋನ್ ಅರ್ಜಿಗಳನ್ನು ಮತ್ತು ಅಗ್ರೀಮೆಂಟಗಳಿಗೆ ಸಹಿ ಮಾಡಿಸಿಕೊಂಡು ಬರುತ್ತಿದ್ದ ಎಂದರೆ ಸರಿಯಲ್ಲ.

4. ಚೆಕ್ಕನ್ನು ನಾವು ಲೋನ್ ಡಿಫಾಲ್ಟ್ ಆದ ಮೇಲೆ ಏಜೆಂಟರು ಚೆಕ್ ತೆಗೆದುಕೊಂಡು ಬರುತ್ತಾರೆ. ಆರೋಪಿತನು 2021 ರಲ್ಲಿ ಡಿಫಾಲ್ಟ್ ಆಗಿರುತ್ತದೆ. 2019 ರಲ್ಲಿ ಕಿರಾಣಿ ಅಂಗಡಿ ಇರಲಿಲ್ಲ ಎಂದರೆ ಸರಿಯಲ್ಲ. ಅಂಗಡಿ ಮತ್ತು ಬುಕ್-ಸ್ಟಾಲ್ ಫೋಟೊ ತೆಗೆದು ಹಾಜರು ಪಡಿಸಿರುವುದಿಲ್ಲ. ಬಾಬುರಾವ್ ಗಸ್ತಿ ಎನ್ನುವವರು ಮುಂಗಡವಾಗಿ ಎರಡೆರಡು ಲೋನ್

ಅಪ್ಲಿಕೇಶನ್ ತುಂಬಿಸಿಕೊಂಡು ಚೆಕ್ಕನ್ನು ಪಡೆದು ತಂದು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ನಾವು ಮತ್ತು ಏಜೆಂಟ್ ರವರು ಸೇರಿ ನಮ್ಮ ಬ್ಯಾಂಕಿನಿಂದ ಸಾಕಷ್ಟು ಜನರಿಗೆ ಮೋಸ ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ಶ್ರೀನಿವಾಸ ಎನ್ನುವವರು ಅದೇ ಊರಿನವರಾಗಿದ್ದು ಕಟ್ಟಿದ ಸಾಲದ ಹಣವನ್ನು ಬಾಬುರಾವ್ ಗಸ್ತಿ ರವರು ತನ್ನ ವೈಯಕ್ತಿಕ ಖಾತೆಗೆ ಜಮಾ ಮಾಡಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 18-12-2021 ರಂದು ನಾವು ವಕೀಲರ ಮೂಲಕ ನೋಟಿಸು ಕೊಟ್ಟಿರುತ್ತೇವೆ. ಸದರಿ ನೋಟಿಸನ್ನು ಆರೋಪಿ ತಿರಸ್ಕಾರ ಮಾಡಿರುತ್ತಾನೆ. ಆರೋಪಿತನು ಆಗ ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ಚೆಕ್ಕನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಸಹಿ/-

ಪ್ರಧಾನ ಸಿವಿಲ ನ್ಯಾಯಾಧೀಶರು &
ಜೆಎಂಎಫ್‌ಸಿ ಲಿಂಗಸುಗೂರು.